## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. 506/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಶಿವಾನಂದ ಬಿ. ಕುಡ್ತಲಕರ |
| ತಂದೆಯ ಹೆಸರು | : | ಬಾಲಕೃಷ್ಣ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಜಿಲ್ಲಾ ಶಸ್ತ್ರ ಚಿಕಿತ್ಸಕರು, ಕಾರವಾರ |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ **15-12-2022**

**ಮುಖ್ಯ ವಿಚಾರಣೆಃ ಫಿರ್ಯಾದಿದಾರರ ಪರಃ ಶ್ರೀ ಎನ್.ವಿ.ಎನ್. ವಕೀಲರಿಂದಃ**

ನಾನು ಕಳೆದ 26 ವರ್ಷಗಳಿಂದ ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ವೈದಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿ ಈಗ ಕಳೆದ 13 ವರ್ಷಗಳಿಂದ ಪ್ರಸೂತಿ ಸ್ತ್ರೀ ರೋಗ ಹಾಗೂ ಕಳೆದ 6 ವರ್ಷಗಳಿಂದ ಜಿಲ್ಲಾ ಶಸ್ತ್ರ ಚಿಕಿತ್ಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಕಳೆದ 13 ವರ್ಷಗಳಿಂದ ಉತ್ತಮ ಸೇವೆಯನ್ನು ನೀಡಿ ಜನರ ಮೆಚ್ಚುಗೆಯನ್ನು ಗಳಿಸಿದ್ದೇನೆ. ಕರೋನಾ ಸಮಯದಲ್ಲಿಯೂ ಸಹ ನಾನು ಉತ್ತಮ ಸೇವೆಯನ್ನು ನಿರ್ವಹಿಸಿರುತ್ತೇನೆ. ಅದರಂತೆ ನನ್ನ ಪತ್ನಿಯು ಸಹ ಕಾರವಾರದ ನಗರ ಸಭೆಯಲ್ಲಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದರು. ನನ್ನ ಮಗನು ಸಹ ಎಂ.ಬಿ.ಬಿ.ಎಸ್. ಪದವಿ ಪಡೆದು ಕಾರವಾರದಲ್ಲಿ ಆಸ್ಪತ್ರೆ ಮಾಡುವ ಆಕಾಂಕ್ಷೆಯನ್ನು ಇಟುಕೊಂಡಿರುತ್ತಾರೆ. ನಾನು ಉತ್ತಮ ಸೇವೆ ನೀಡಿರುವುದರಿಂದ ಮನೆ ಮನೆಗೂ ಚಿರಪರಿಚಿತನಾಗಿರುತ್ತೇನೆ.

ಆದರೆ, ದಿಃ 26-05-2021 ರಂದು ರಾಘು ವಾಸುದೇವ ನಾಯ್ಕ, ಅರ್ಚನಾ ಗೋಪಿನಾಥ ವೆಂಗಣಕರ ಮತ್ತು ಸುರೇಖಾ ವಿಠ್ಠಲ ನಾಯ್ಕ ನಮ್ಮ ವೈದ್ಯಕೀಯ ಸಂಸ್ಥೆಯ ಕಂಪೌಂಡ್ ನಲ್ಲಿ ನನ್ನ ಮೇಲೆ ಸುಳ್ಳು ಆಪಾದನೆಗಳ ವಿಡಿಯೋ ಮಾಡಿ ಅದಕ್ಕೆ " ತಾಯಿಗೆ ಕ್ಯಾನ್ಸರ್, ತಂದೆಗೆ ಪ್ಯಾರಲೈಸ್ " ಮೂರು ತಿಂಗನಿಂದ ಸಂಬಳ ಇಲ್ಲ ಡಾಕ್ಟರ್ ಕುಡ್ತರಕರ

ಎಂಬುದಾಗಿ ಒಂದು ಶಿರ್ಷಿಕೆ ಯನ್ನು ನೀಡಿ 'ಯು-ಟೂಬ್' ನಲ್ಲಿ ಅಪಲೋಡ್ ಮಾಡಿರುತ್ತಾರೆ. ಇದರಿಂದ ನನ್ನ ಮಾನ ಮರ್ಯಾದೆ ಮತ್ತು ಘನತೆಗೆ ತೀವ್ರ ಪೆಟ್ಟಾಗಿರುತ್ತದೆ. ಸದ್ರಿ ವಿಡಿಯೋದಲ್ಲಿ 1 ನೇ ಆರೋಪಿ ಮಾನ ಹಾನಿಯಾಗುವ ಪದಗಳನ್ನು ಉಪಯೋಗಿಸಿರುತ್ತಾರೆ. ಸದ್ರಿ ವಿಡಿಯೋದಲ್ಲಿ ಡಾಕ್ಟರ್ ಶಿವಾನಂದ ಕುತ್ತರಕರ ರವರ ದಾದಾಗಿರಿ ಬಹಳ ಆಗಿದೆ, ಮೂರು ತಿಂಗಳಿನಿಂದ ಸಂಬಳ ನೀಡುತ್ತಿಲ್ಲ ಮತ್ತು ಅದಕ್ಕೆ ಕಾರಣ ಕುತ್ತಲಕರ ಮತ್ತು ಹುಡುಗಿಯರನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಸದ್ರಿ ವಿಡಿಯೋದಲ್ಲಿ ಮಹಿಳೆಯವರಿಗೆ ಮತ್ತು ಹೆಂಗಸರಿಗೆ ಹಿಂಸೆ ನೀಡುತ್ತಿದ್ದಾರೆ ಎಂದು ಹೇಳಿರುತ್ತಾರೆ. ಸದ್ರಿ ವಿಡಿಯೋದಲ್ಲಿ ಏಜನ್ಸಿ ಮೇಲೆ ದಬ್ಬಾಳಿಕೆ ಮಾಡಿ ದಾದಾಗಿರಿ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ. ಅದರಂತೆ ಗೀತಾ ಬಾನಾವಳಿಕರ ಸಾವಿಗೆ ಇವರೇ ಮೂಲ ಕಾರಣ, ಇಂತಹ ಸರ್ಜನ್ ಬೇಕಾ, ಸುಳ್ಳು ಸಾಕ್ಷಿ ನೀಡಿ ಅಂತ ಸಿಬ್ಬಂದಿಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ. ಹೊರಗಡೆ ಬಂದಾಗ ಕುಟುಂಬಸ್ಥರ ಮೇಲೆ ದಬ್ಬಾಳಿಕೆ ಮಾಡುತ್ತಾರೆ ಎಂದು, ಡಾಕ್ಟರ್ ಶಿವಾನಂದರವರು ಬ್ರಷ್ಟ ಇರುತ್ತಾರೆ, ಭ್ರಷ್ಟಾಧಿಕಾರಿ, ಭ್ರಷ್ಟ ಡಾಕ್ಟರರು, ಇಂತಹ ಸರ್ಜನ್ ಬೇಕಾ ಎಂದು ಹೇಳಿ ಸಿಜರಿಯನ್ ಡೆಲಿವರಿ ಮಾಡುವಾಗ 10 ರಿಂದ 15 ಸಾವಿರ ಬೇಡುತ್ತಾರೆ ಎಂದು ಹೇಳಿರುತ್ತಾರೆ.

2 ನೇ ಆರೋಪಿಯು ಮೂರು ತಿಂಗಳಿನಿಂದ ಸಂಬಳ ನೀಡುತ್ತಿಲ್ಲ, ವೈಯಕ್ತಿಕ ದ್ವೇಷ ಇಟ್ಟುಕೊಂಡು ಏನೇನು ಮಾಡುತ್ತಿದ್ದಾರೆ ಅವರ ಜೊತೆ ಸಹಪಾಠಿಗಳು ಸಹ ಇರುತ್ತಾರೆ, ಅವರು ಹೇಳಿದಾಗ ಕುಣಿಯುತ್ತಾರೆ ಎಂದು ಹೇಳಿರುತ್ತಾರೆ.

3 ನೇ ಆರೋಪಿಯು ವಿಟನೆಸ್ ಕೊಡಲಿಲ್ಲ ಎಂದು ಟಾರ್ಚರ್ ಕೊಡುತ್ತಾರೆ ಎಂದು ನನ್ನ ಮೇಲೆ ಅಪಾದಿಸಿರುತ್ತಾರೆ ಹಾಗೂ ಸುಳ್ಳು ಸಾಕ್ಷಿ ಹೇಳಲಿಲ್ಲ ಹಾಗೂ ಓ.ಟಿ. ಒಳಗಡೆ ನಾನು ಏನು ಕೊಲೆ ಮಾಡಿಲ್ಲ, ಅಂತಹದ್ದೇನು ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನೀಡಿಲ್ಲ ಎಂದು ಆದಕಾರಣ ನಮಗೆ ಸಂಬಳ ನೀಡುತ್ತಿಲ್ಲ ಎಂದು ನಮ್ಮ ಮೇಲೆ ಆಪಾದಿಸಿರುತ್ತಾರೆ. ಹಾಗೂ ಎಲ್ಲವನ್ನು ದುಡ್ಡಿನಿಂದಲೇ ಮುಚ್ಚಿಸುತ್ತಾರೆ ಎಂದು ನನ್ನ ಮೇಲೆ ಆಪಾದಿಸಿರುತ್ತಾರೆ. ನಾವು ಸುಳ್ಳು ಸಾಕ್ಷಿ ನೀಡುವುದಿಲ್ಲ ಹಾಗೂ ನನ್ನ ಸಂಬಳವನ್ನು ನೀಡದೇ ಇದ್ದರೇ ನಾವು ಸುಸೈಡ್ ಮಾಡಿಕೊಳ್ಳುತ್ತೇನೆ, ಇಂತಹ ಸರ್ಜನ್ ನಮಗೆ ಬೇಡ ಎಂದು ಆಪಾದಿಸಿರುತ್ತಾರೆ.

1 ರಿಂದ 3 ನೇ ಆರೋಪಿಗಳು ನನ್ನ ಮೇಲೆ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿರುತ್ತವೆ. 2 ಮತ್ತು 3 ನೇ ಆರೋಪಿತರು ಹೊರ ಗುತ್ತಿಗೆ ಆಧಾರದ ಮೇಲೆ ಯುನಿವರ್ಸಲ್ ಏಜನ್ಸಿಯಲ್ಲಿ 2020 ರಲ್ಲಿ ಕೆಲಸ ಮಾಡುತ್ತಿದ್ದರು. 2021 ರಲ್ಲಿ ಸದ್ರಿ ಏಜನ್ಸಿ ಕೆಲಸವನ್ನು Sky Line, Madhura, Diksha ಏಜನ್ಸಿಯವರು ವಹಿಸಿಕೊಂಡರು. ಹೊರ ಗುತ್ತಿಗೆಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಅಧಿಕಾರ ಏಜನ್ಸಿಯವರದ್ದಾಗಿತ್ತು. ಆದರೆ 2 ಮತ್ತು 3 ನೇ ಆರೋಪಿತರು 2021 ರಿಂದ ಹೊರ ಗುತ್ತಿಗೆ ಕೆಲಸವನ್ನು ಮಾಡುತ್ತಿರಲಿಲ್ಲ ಆದರೆ ಯುನಿವರ್ಸಲ್ ಏಜನ್ಸಿಯವರು ಸಮವಸ್ತ್ರವನ್ನು ಹಾಕಿ ಆಸ್ಪತ್ರೆಯಲ್ಲಿ ಓಡಾಡಿಕೊಂಡು ಇದ್ದರು. ಆಗ ನಮ್ಮ ಆರ್.ಎಂ.ಓ. ರವರು ಡಿ.ವೈ.ಎಸ್.ಪಿ.ಯವರ ಮುಂದೆ 2 ಮತ್ತು 3 ನೇ ಆರೋಪಿತರು ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸುತ್ತಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ನಾನು ಯಾವುದೇ ಹೊರ ಗುತ್ತಿಗೆ ಆಧಾರದ ನೌಕರಿಯನ್ನು ತೆಗೆದುಕೊಳ್ಳುವ ಅಧಿಕಾರ ಮತ್ತು ಅವರಿಗೆ ಸಂಬಳ ನೀಡುವು ಅಧಿಕಾರ ನನಗೆ ಇರಲಿಲ್ಲ. ಒಂದು ವೇಳೆ ಅವರಿಗೆ ಕುಂದು ಕೊರತೆಗಳು ಇದ್ದಪಕ್ಷದಲ್ಲಿ ಅವರು ಏಜನ್ಸಿ ಮೂಲಕವೇ ಬಗೆಹರಿಸಿಕೊಳ್ಳಬೇಕಾಗಿತ್ತು.

ನಾನು ಗೀತಾ ಬಾನಾವಳಿಕರ ಕೇಸಿನಲ್ಲಿ 2 ಮತ್ತು 3 ನೇ ಆರೋಪಿತರಿಗೆ ನನ್ನ ಪರವಾಗಿ ಸಾಕ್ಷಿ ಹೇಳಿ ಎಂದು ನಾನು ಅವರಿಗೆ ಹೇಳಿಲ್ಲ. ಆ ರೀತಿ ಹೇಳುವ ಪ್ರಮೇಯ ನನಗೆ ಬರುವುದೇ ಇಲ್ಲ. ಯಾಕೆಂದರೆ ಆ ಸಮಯದಲ್ಲಿ 2 ಮತ್ತು 3 ನೇ ಆರೋಪಿತರು ಸೆಕ್ಯುರಿಟಿ ಗಾರ್ಡ್ ಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. 2 ಮತ್ತು 3 ನೇ ಆರೋಪಿತರಿಗೆ ಓ.ಟಿ. ಒಳಗಡೆ ಹೋಗುವ ಅವಕಾಶ ಇರಲಿಲ್ಲ.ಆದಾಗ್ಯೂ ಸಹ 2 ಮತ್ತು 3 ನೇ ಆರೋಪಿತರು ನನ್ನ ಮೇಲೆ ವಿನಾ ಕಾರಣ ವಿಡಿಯೋದಲ್ಲಿ ಸುಳ್ಳು ಅಪಾದನೆ ಮಾಡಿರುತ್ತಾರೆ.

1 ನೇ ಆರೋಪಿಗೆ ನನ್ನ ಮೇಲೆ ವೈಯಕ್ತಿಕ ದ್ವೇಷ ಇರುತ್ತದೆ. 1 ನೇ ಆರೋಪಿಯು ಸಾಯಂಕಾಲ ಸಮಯದಲ್ಲಿ ನಮ್ಮ ಆಸ್ಪತ್ರೆಯ ಅವರಣದಲ್ಲಿ ಅಲ್ಲಲ್ಲಿ ತಿರುಗಾಡುತ್ತಿದ್ದರು. ನಾನು ಅದನ್ನು ಸಿಸಿ. ಕ್ಯಾಮರಾದಲ್ಲಿ ಆಗಾಗ್ಗೆ ನೋಡುತ್ತಿದ್ದೆನು. ಆಗ ನನಗೆ 1 ನೇ ಆರೋಪಿಯ ಮೇಲೆ ಸಂಶಯ ಬಂತು. ಆಗ ನಾನು ಕೆಳಗಡೆ ಬಂದು ಪರಿಶೀಲಿಸಿದಾಗ ಅವರ ಜೇಬಿನಲ್ಲಿ ಸಣ್ಣ ಸಣ್ಣ ಪೊಟ್ಟಣಗಳು ಇದ್ದವು. ನಾನು ಸದ್ರಿ ಸಣ್ಣ ಸಣ್ಣ ಪೊಟ್ಟಣವನ್ನು ತೆಗೆಯಲು ಪ್ರಯತ್ನಪಟ್ಟಾಗ ಅವರು ನನ್ನಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ನನಗೆ ಅವರ ಮೇಲೆ ಅವರ ಜೇಬಿನಲ್ಲಿರುವುದು ಮಾದಕ ವಸ್ತುಗಳಾದ ಗಾಂಜಾ ವಗೈರೆ ಇರಬಹುದು ಎಂದು ಸಂಶಯ ಬಂತು. ಅದನ್ನು ಸಿಟ್ಟಿನಲ್ಲಿಟ್ಟುಕೊಂಡು 1 ನೇ ಆರೋಪಿಯು ನನ್ನ ಮೇಲೆ

ಆಗಾಗ್ಗೆ ಹೆಸರನ್ನು ಹಾಳು ಮಾಡುವ ಕೆಲಸವನ್ನು ಮಾಡುತ್ತಿದ್ದರು. ಇದೇ ದ್ವೇಷ ಇಟ್ಟುಕೊಂಡು 1 ನೇ ಆರೋಪಿಯು ಸದ್ರಿ ವಿಡಿಯೋವನ್ನು ಮಾಡಿ ಅದನ್ನು ಅಪಲೋಡ್ ಮಾಡಿರುತ್ತಾರೆ. ಸದ್ರಿ ವಿಡಿಯೋವನ್ನು ಅಂದಾಜು 3,400 ಜನರು ನೋಡಿರುತ್ತಾರೆ. ಇದರಿಂದ ನನ್ನ ಮಾನ ಮಾರ್ಯಾದೇಗೆ ತುಂಬಾ ಧಕ್ಕೆ ಉಂಟಾಗಿರುತ್ತದೆ. ನನ್ನ ಹಿತೈಶಿಗಳು ಕೂಡಲೇ ನನಗೆ ಫೋನ್ ಮಾಡಿ ಇದರ ಬಗ್ಗೆ ಕೇಳಿರುತ್ತಾರೆ. ಕೆಲವರು ನಮ್ಮ ಆಸ್ಪತ್ರೆಗೆ ಮತ್ತುತ ನಮ್ಮ ಮನೆಗೆ ಬಂದು ಇದೆನಪ್ಪ ಭಾನಗಡಿ ಎಂದು ಈ ಬಗ್ಗೆ ಕೇಳಿರುತ್ತಾರೆ. ಆಗ ನಾನು ಇದಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಅವರಿಗೆ ಸಮಜಾಯಿಷಿ ನೀಡಿರುತ್ತೇನೆ. ಆದಾಗೂ ಸಹ ಅವರು ನಾನು ಕೊಟ್ಟ ಸಮಂಜಾಯಿಷಿಯನ್ನು ಒಪ್ಪಿಕೊಂಡಿರುವುದಿಲ್ಲ. ಈ ಘಟನೆಯಿಂದ ಸಾರ್ವಜನಿಕರು ನನ್ನನ್ನು ಗೌರವದಿಂದ ನೋಡುವುದಿಲ್ಲ. ನನಗೆ ಇದರಿಂದ ಸಾರ್ವಜನಿಕ ಸಮಾರಂಭಗಳಿಗೆ ಮತ್ತು ಮದುವೆ ಮುಂಜಿ ಕಾರ್ಯಕ್ರಮಗಳಿಗೆ ಹೋಗಲು ಹಿಂಜರಿಕೆಯಾಗಿರುತ್ತದೆ. ಇದರಿಂದ ನನ್ನ ಪತ್ನಿ ಮತ್ತು ಮಗನಿಗೂ ಸಹ ಆಘಾತ ಉಂಟಾಗಿರುತ್ತದೆ.

ದಿಃ 27-05-2021 ರಂದು ನಾನು ಪುನಃ ಆಸ್ಪತ್ರೆಗೆ ಕರ್ತವ್ಯಕ್ಕೆ ಹೋದಾಗ ಮತ್ತು ಕೋವೀಡ್ ವಿಭಾಗಕ್ಕೆ ರೌಂಡ್ಸಗಾಗಿ ಹೋದಾಗ 1 ನೇ ಆರೋಪಿಯು ನನ್ನನ್ನು ಅಡ್ಡಗಟ್ಟಿ ನಿನ್ನ ಮಾನ ಮರ್ಯಾದೆ ಬಗ್ಗೆ ಯು-ಟ್ಯೂಬ್ ನಲ್ಲಿ ಅಪಲೋಡ್ ಮಾಡಿದ್ದರೂ ಸಹ ಪುನಃ ಹೊರಗೆ ಬಂದಿದ್ದೀಯಾ ಎಂದು ಕೊಂಕಣಿ ಭಾಷೆಯ ಕೆಟ್ಟ ಶಬ್ದಗಳಿಂದ ನನಗೆ ಬೈದಿರುತ್ತಾರೆ ಮತ್ತು ರಾಂಡೆಚ್ಯಾ ಎಂದು ಬೈದು ಬೆದರಿಕೆ ಹಾಕಿರುತ್ತಾರೆ. 1 ನೇ ಆರೋಪಿಯು ನನ್ನನ್ನು ಮುಂದೆ ಹೋಗಲು ಬಿಟ್ಟಿರುವುದಿಲ್ಲ.

ದಿಃ 27-05-2021ರ ಘಟನೆಯ ಬಗ್ಗೆ ನಾನು ನಗರ ಪೊಲೀಸ್ ಠಾಣೆಗೆ ಹೋಗಿ 1 ನೇ ಆರೋಪಿಯ ಮೇಲೆ ದೂರನ್ನು ಕೊಟ್ಟಿರುತ್ತೇನೆ. ನಂತರ ನಾನು ನಮ್ಮ ವಕೀಲರ ಹತ್ತಿರ ಹೋಗಿ ಮಾನ ಹಾನಿ ಕೇಸ್ ಹಾಕಲು ಕೋರಿಕೊಂಡಿರುತ್ತೇನೆ. ನಾನು ಮಾಹಿತಿ ಕೊಟ್ಟ ಪ್ರಕಾರ ನಮ್ಮ ವಕೀಲರು ಆರೋಪಿಗಳಿಗೆ ನೊಟಿಸ್ ನ್ನು ಕೊಟ್ಟಿರುತ್ತಾರೆ. ಅದಕ್ಕೆ 1 ನೇ ಆರೋಪಿಯು ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲ. 2 ಮತ್ತು 3 ನೇ ಆರೋಪಿತರು ಅಸಮಂಜಸ ಉತ್ತರವನ್ನು ಕೊಟ್ಟಿರುತ್ತಾರೆ. ಪ್ರಾಮಾಣಿಕ ಸೇವೆ ಮಾಡುತ್ತಿದ್ದ ನನಗೆ ಈ ರೀತಿ ಮಾನ ಹಾನಿ ಆರೋಪಣೆ ಮಾಡಿದ್ದರಿಂದ ಜೀವನವೇ ಬೇಡ ಎಂದು

ಅನಿಸಿತ್ತು. ಇದರಿಂದ ನನಗೆ ಧಕ್ಕೆ ಉಂಟಾಗಿದ್ದು ಆರೋಪಿಗಳ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ನಾನು ನ್ಯಾಯಾಲಯಕ್ಕೆ ಅಡಕ ಮುದ್ರಿಕೆ ಮತ್ತು ಪೆನ್ ಡ್ರೈವ್ ನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ.1 ಮತ್ತು ನಿಪಿ.1(ಎ) ಎಂದು ಗುರುತಿಸಲಾಯಿತು. ಭಾರತೀಯ ಸಾಕ್ಷಿ ಅಧಿನಿಯಮ ಕಲಂ. 65(ಬಿ) ಅಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಆರೋಪಿಗಳಿಗೆ ಕೊಟ್ಟ ದಿಃ09-07-2021ರ ಲೀಗಲ್ ನೊಟೀಸ್ ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.3 ಎಂದೂ ಗುರುತಿಸಲಾಯಿತು. ಮೂರು ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.4 ರಿಂದ ನಿಪಿ.9 ಎಂದು ಗುರುತಿಸಲಾಯಿತು.

ಮುಂದುವರಿದು ದಿಃ26-01-2020 ರಿಂದ ರಾಘು ವಾಸುದೇವ ನಾಯ್ಕ 1ನೇ ಆರೋಪಿ ರವರು ಪದೇ ಪದೇ ನಮ್ಮ ಕ್ಯಾಂಪಸ್ ಗೆ ಬಂದು ವೈಯಕ್ತಿಕ ದುರುದ್ದೇಶದಿಂದ ಅಲ್ಲಿ ಕೆಲಸ ಮಾಡಲು ಬಿಡುವುದಿಲ್ಲ. ಅವರುತಮ್ಮನ್ನು ಸಮಾಜ ಸೇವಕರು ಎಂದು ಕರೆಯುತ್ತಿದ್ದು ಅವರು ಉತ್ತರಕನ್ನಡ ವಿದ್ಯಾರ್ಥಿ ಒಕ್ಕೂಟ ಸಂಘದ ಅಧ್ಯಕ್ಷರು ಎಂದು ಹೇಳುತ್ತಿದ್ದು ಪದೇ ಪದೇ ನಮ್ಮ ಮೇಲಾಧಿಕಾರಿಗಳಿಗೆ ವೈಯಕ್ತಿಕ ಕಾರಣದಿಂದ ಏನೇನು ಪತ್ರಗಳನ್ನು ಬರೆದು ಹಾಕುವುದು ಮಾಡುತ್ತಾರೆ. ನಾನು ಆರ್.ಟಿ.ಐ. ಮೂಲಕ ಅದರ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿರ್ಭಂದಕರು ಅವರು ಮಾಹಿತಿ ಅಡಿಯಲ್ಲಿ ಉತ್ತರ ಪ್ರಕಾರ ಉತ್ತರಕನ್ನಡ ವಿದ್ಯಾರ್ಥಿ ಒಕ್ಕೂಟ ಸಂಘ ಎನ್ನುವುದು ಯಾವುದೇ ನೊಂದಾಯಿತ ಸಂಘ ಆಗಿರುವುದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ. ಉತ್ತರಕನ್ನಡ ವಿದ್ಯಾರ್ಥಿ ಒಕ್ಕೂಟ ಸಂಘ ಅಧ್ಯಕ್ಷರು ರಾಘು ನಾಯ್ಕ ಎಂದು ಅದರ ಲೆಟರ ಹೆಡ್ ನಲ್ಲಿ ಪ್ರತಿಯೊಂದು ಕಡೆ ಸುಮ್ಮನೆ ಸಮ್ಮನೆ ಪತ್ರ ವವಹಾರ ಮಾಡುತ್ತಿದ್ದಾರೆ ಅದರಿಂದ ಸೇವೆ ಕೊಡುವ ಬದಲು ಪತ್ರಗಳಿಗೆ ಉತ್ತರ ಕೊಡುವುದೆ ಹಿಂಸೆ ಆಗಿದೆ . ಅವರ ಮೇಲೆ ಪೊಲೀಸಿ ದೂರು ಮಾಡಿದಾಗ ಪೊಲೀಸರು ಅವರು ಈಗಾಗಲೇ ಉತ್ತರ ಕನ್ನಡ ಪೊಲೀಸರ ರೌಡಿ ಶೀಟರ್ ಹೆಸರಿನಲ್ಲಿ ಅವರು ಹೆಸರು ಇದೆ ಎಂದು ತಿಳಿಸಿದ್ದು ಆದ ಕಾರಣ ಆರೋಪಿತರಿಂದ ನನಗೆ ಒಬ್ಬನಲ್ಲದೇ ಕಾರವಾರ ಉತ್ತರಕನ್ನಡ ಎಲ್ಲ ಪ್ರತಿಶಿಷ್ಟ ವ್ಯಕ್ತಿಗಳಿಗೆ ಇವರಿಂದ ಹಿಂಸೆ ಆಗುವ ಸಂಭವ ಇದೆ. ಹಾಗೂ ಅವರಿಗೂ ಮಾನ ನಷ್ಟ ಉಂಟಾಗಿ ಜೀವ ಕಳೆದುಕೊಳ್ಳುವ ಪರಿಸ್ಥಿತಿ ಇದೆ.

(ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನಾಯಿಕ ದಂಡಾಧಿಕಾರಿಗಳು,

ಕಾರವಾರ